ರ ಗೆಜೆಟ್

ದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ|| 15, ಸ್ನ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯೆಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರ್ಯಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ಸೆಂಟ್ರಲ್ ಜೈಲ್.

ಇಸ್ತಿಹಾರ್‌ನಾಮಾ.

ತಾರೀಖು 4ನೇ ನವಂಬರ್ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿಯೂ, ಡಿಸ್ಟ್ರಿಕ್ಟು ಲಾಕಪ್ಪಿನಲ್ಲಿಯೂ, ಖೈದ್ ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಯೆ ಬೇಕಾದ ಆಹಾರ ಪದಾರ್ಥಗಳು ವಗ್ಯೆರೇ ದರೋಬಸ್ತು ಜಿನಸಿಗಳನ್ನೂ ಕಂಟ್ರ್ಯಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಕೊಡಲ್ಪಡುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಸನ್ 1884ನೇ ಇಸವಿ ಡಿಸೆಂಬರ್ 1ನೇ ತಾರೀಖಿನ ವರಿಗೆ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ತೆಗದುಕೊಳ್ಳುವರು.

2. ಮೇಲೆ ಕಂಡ ತಾರೀಖಿಗೆ ತರುವಾಯ ದರಖಾಸ್ತುಗಳು ಯಾವವೂ ತೆಗದುಕೊಳ್ಳಲ್ಪಡಲಾರವು.

3. ದರಖಾಸ್ತುಗಳ ಮೇಲೆ "ಸೆಂಟ್ರಲ್ ಜೈಲಿಗೂ, ಡಿಸ್ಟ್ರಿಕ್ಟ್ ಲಾಕಪ್ಪಿಗೂ ಜಿನಸೀಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. ನಗದಾಗಿಯಾಗಲಿ ಕರೆಂಸಿ ನೋಟುಗಳ ಮೂಲಕವಾಗಿಯಾಗಲಿ, 500 ರೂಪಾಯಿಗಳ ಡಿಪಾಜಿಟ್ ದಾಖೀಲ್ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಮೇಲೆ ಕಂಡ ತಾರೀಖಿನೊಳಗೆ ಅಲ್ಲಿಗೆ ಬರುವದಕ್ಕೆ ಖಾಯಿಷ್ ಮಾಡುವ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ ಈಕೆಳಗೆ ಬರುವ ಒಳ್ಳೇತರಹಾದ ಜಿನಸೀಗಳನ್ನು ರೂಪಾಯಿ 1ಕ್ಕೆ ಪೌಂಡ್ ತೂಕದ ಪ್ರಕಾರ ಸರಬರಾಯಿ ಮಾಡತಕ್ಕ ದರವನ್ನು ನಮೂದಿಸತಕ್ಕದ್ದು.

ಅಕ್ಕಿ ಹಸೀ ಅಕ್ಕಿ ವ ಕುದಪಲ ಅಕ್ಕಿ
ರಾಗಿ
ಬೇಳೆ
ಅವರೆ
ಮಾಂಸ
ಮೊಸರು
ಯಳ್ಳೆಂಣೆ
ತುಪ್ಪ
ಹುಣಸೇಹಣ್ಣು
ಉಪ್ಪು
ಮಸಾಲೆ ಪುಡಿ
ಈರುಳ್ಳಿ
ಬೆಳ್ಳುಳ್ಳಿ
ತರಕಾರಿ
ಹುರಳಿ
ರವೆ
ಸಕ್ಕರೆ
ಕಾಫಿ
ತೇ ಯಲೆ
ರೊಟ್ಟಿ
ಹಾಲು
ಸೀಗೆಕಾಯಿ
ಸಬ್ಬು
ಗೇರುಬೀಜ
ಮೆಣಸು
ಒಣಗಿದ ಸೌದೆ

7. ದರಖಾಸ್ತು ಪಟ್ಟಿಯಲ್ಲಿ ಮೇಲೆನಮೂದಿಸಿದ ಪದಾರ್ಥಗಳಿಗೆ ಮಾತ್ರವಲ್ಲದೆ ದೀಪದ ಯಂಣೆ, ಕೆರೋಜಿನ್ ಯಂಣೆ, ಮಂಣಿನ ಹರಿವಾಣಗಳು, ಲೋಟಾಗಳು, ಪರಿಕೆ ವಗೈರೇ ಪದಾರ್ಥಗಳಿಗೂ ದರಗಳು ನಮೂದಿಸಬೇಕು. ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವ ಬಗ್ಯೆ ರಾಗಿಯನ್ನು ಸರಬರಾಯಿ ಮಾಡತಕ್ಕದ್ದು ಮತ್ತು ಹಿಟ್ಟಾಗಿ ಕೊಡಲ್ಪಡುವದು, ರಾಗಿ ಧಾರಣೆ ಪ್ರಕಾರ ಸರಬರಾಯಿ ಮಾಡಿದ್ದನ್ನು ಹಾಗೆ ಕೊಡಲ್ಪಟ್ಟ ಪರಿಮಾಣದ ಮೇಲೆ ಲೆಖ್ಖ ಮಾಡಿ ಅದರಂತೆ ಮೊಬಲಗು ಪಾವತೀ ಮಾಡಲ್ಪಡುತ್ತೆ.

8. (ನಾನಾ ಸ್ಕೇಲ್‌ಗಳ ಮೇಲೆ ಯಿರುವ ರೋಜಿನಾ 750 ಮಂದಿ ಖೈದಿಗಳಿಗಾಗಿ) ಈ ಸಂವತ್ಸರಕ್ಕೆ ಬೇಕಾಗಬಹುದಾದ ಮುಖ್ಯ ಪದಾರ್ಥಗಳ ಅಂದಾಜು ಇದರಡೀ ಕಂಡಂತೆ ಯಿರತಕ್ಕದ್ದು.

	ಪೌಂಡುಗಳು.		ಪೌಂಡುಗಳು.
ರಾಗಿ	346,340	ಯಳ್ಳೆಂಣೆ	2,361
ಅಕ್ಕಿ	78,471	ಉಪ್ಪು	10,417
ತೊಗರಿ ಅಥವಾ ಅವರೆ	52,083	ಮಸಾಲೆ ಪುಡಿ	7,986
ತರಕಾರಿ	104,161	ಈರುಳ್ಳಿ	10,417
ಮಾಂಸ	23,612	ಸೌದೆ	416,667
ತುಪ್ಪ	2,361		

9. ಸೂಪರಿಂಟೆಂಡೆಂಟರವರು, ಯಾವ ದರಖಾಸ್ತನ್ನಾಗಲಿ ಕಾರಣವನ್ನು ತಿಳಿಸದೇಯೇ ನಿರಾಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡು ಯಿರುತ್ತಾರೆ.

10. ಮಂಜೂರಾದ ದರಖಾಸ್ತುದಾರನ ಠೇವಣೀ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು ಅವನು ಗುತ್ತಿಗೇಚೀಟು ಬರದುಕೊಡಲಿಕ್ಕಾಗಲಿ ತನ್ನ ಗುತ್ತಿಗೆ ಮಂಜೂರಾದ್ದು ತನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು ಒಂದು ವಾರದೊಳಗಾಗಿ ನಗದಾಗಿ ಯಾ ಗವರ್ನಮೆಂಟ್

ಪತ್ರಗಳ ಮೂಲಕ 1,500 ರೂಪಾಯಿಗಳಿಗೆ ಜಾಮೀನ್ ಕೊಡಲಿಕ್ಕಾಗಲಿ ತಪ್ಪಿದರೆ ಸದರೀ ಠೇವಣೀ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸ್ ಯಾವದೂ ಕೊಡಲ್ಪಡಲಾರದು: ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗಾಗಿ ಮೊಬಲಗುಗಳು ಪ್ರತಿ ತಿಂಗಳ 1ನೇ ತಾರೀಖಿಗೆ ತರುವಾಯ ಕೂಡಿದಷ್ಟು ತ್ವರೆಯಾಗಿ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರಿಂದ ಸಲ್ಲಿಸಲ್ಪಡುವದು.

12. ಕಂಟ್ರಾಕ್ಟುದಾರನಿಗೆ ಉಗ್ರಾಣದ ಬಗ್ಯೆ ಒಂದು ಖೋಲಿಯು ಕೊಡಲ್ಪಡುವದು. ಅದರಲ್ಲಿ ನಷ್ಟವಾಗದೇ ಯಿರುವ ದರೋಬಸ್ತು ಪದಾರ್ಥಗಳನ್ನೂ ಅವನು ಯಿಟ್ಟುಕೊಳ್ಳಬಹುದು, ಮಾಂಸ ವಗೈರೆ ನಷ್ಟವಾಗತಕ್ಕ ಪದಾರ್ಥಗಳು ಪ್ರತಿ ದಿವಸ ಬೆಳಿಗ್ಯೆ 8 ಘಂಟೆಯೊಳಗೆ ಜೈಲಿಗೆ ಬಂದಿರತಕ್ಕದ್ದು.

13. ಕಂಟ್ರಾಕ್ಟು ವಳಗೇಣಿಗೆ ಕೊಡಲ್ಪಡಕೂಡದು.

14. ಕಂಟ್ರಾಕ್ಟಿನ ನಿಬಂಧನೆಗಳ ಬಾಬತು ಯಾವ ಅತಿಕ್ರಮಕ್ಕಾಗಲಿ, ಯೂವದಾದರೂ ಹಲ್ಕೀ ಪದಾರ್ಥಗಳ ಸರಬರಾಯಿ ಬಗ್ಯಾಗಲಿ, ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಯಖ್ತ್ಯಾರೀ ಮೇಲೆ 150 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆ ವಸೂಲ್ ಮಾಡಲ್ಪಡುವದು, ಬಾರ್‌ಬಾರ್ ಅತಿಕ್ರಮ ನಡಸಿದ ಪಕ್ಷಕ್ಕೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ್ ಮೊಬಲಗು ಸರಕಾರಕ್ಕೆ ತೆಗೆದುಕೊಳ್ಳಲ್ಪಡುವದು.

15. ಕಂಟ್ರಾಕ್ಟಿನ ಅತಿಕ್ರಮಕ್ಕೆ ಸಂಬಂಧಿಸಿದ ದರೋಬಸ್ತು ಸಂಗತಿಗಳಲ್ಲಿಯೂ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ತೀರ್ಮಾನವು ಆಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು ಕಂಟ್ರಾಕ್ಟಿನ ದರದ ಪ್ರಕಾರವೇ ಖೈದೀಗಳ ವುಪಯೋಗಕ್ಕೋಸ್ಕರ ಜೈಲ್ ತೋಟದಿಂದ ಕಾಯಿಪಲ್ಯಗಳನ್ನು ಕೊಂಡು ಕೊಳ್ಳಬೇಕು.

17. ಹೆಚ್ಚಿಗೇ ಸಂಗತಿ ಯೂವದಾದರೂ ತಿಳಕೊಳ್ಳಬೇಕಾದರೆ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳತಕ್ಕದ್ದು.

18. ಈ ಕಂಟ್ರಾಕ್ಟು ಮೈಸೂರು ಶೀಮೆಯಲ್ಲಿನ ಜೈಲ್‌ಗಳ ಇನ್ಸ್ಪೆಕ್ಟರ್ ಜನರಲ್ಲವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

ಜೆ. ಹೆಂಡರ್ಸನ್,
ಸೂಪರಿಂಟೆಂಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 30ನೇ ಅಕ್ಟೋಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಯಡತೊರೆ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಬೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬಹುದು. ತಪ್ಪಿದರೆ 1877ನೇ ಇಸವಿ ಮೂರನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದನ್ನ ನಾಶಪಡಿಸಲ್ಪಡುತ್ತೆ.

ನಂಬರ್ 9.

ದಸ್ತಾವೇಜು ನಂಬರು.	ದಸ್ತಾವೇಜು ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜು ಬರದು ಕೊಟ್ಟವನ ಹೆಸರು.	ದಸ್ತಾವೇಜು ಬರಸಿ ಕೊಂಡವನ ಹೆಸರು.	ದಸ್ತಾವೇಜಿನ ಸ್ವಭಾವ.
32 1882—83	7—4—82	7—4—82	ಯೆಡತೊರೆ ತಾಲ್ಲೂಕು ಲಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ದೇಪುಗೌಡನ ದ್ಯಾವೇಗೌಡನ ಹೆಂಡತಿ ಜಮೀನಿಂದ ಜೀವಿಸುವ ವಕ್ಕಲಿಗರ ಜಾತಿ ದೊಡ್ಡಿ	ಯಡತೊರೆ ತಾಲ್ಲೂಕು ಲಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ವಕ್ಕಲಿಗರ ಜಾತಿ ಜಿರಾಯಿತು ಕಸಬಿನ ಮರಿಗೌಡ	100 ರೂಪಾಯಿನ ಭೂಸ್ಥಿತಿ ಕ್ರಯಪತ್ರ.